

ವಿವರಿಸುತ್ತಿದ್ದರು, ನೋಡಲು ಪ್ರೇರೇಪಿಸುತ್ತಿದ್ದರು. ಕೆಲವು ದಿನ ಶಾಂತಿನಾಥರೊಡನೆ ಇದ್ದು, ಅವರ ಹೊಸ ಬರವಣಿಗೆ ಓದಿ ಬರುತ್ತಿದ್ದೆ. ಆಗೀಗ ಸುಮಿತ್ರಾ ಅವರು ಚೇಷ್ಟೆಗೆ ತೊಡಗಿದರೆ, ಅವರಿಗಿಂತ ಮೊದಲು ತಾವೇ ಚೇಷ್ಟೆ ಮಾಡಿ, ಆ ವಿಷಯವನ್ನು ಅಲ್ಲಿಗೇ ಮೊಟಕು ಮಾಡುವ ಕತೆಗಾರಿಕೆ, ಕಲೆಗಾರಿಕೆ, ಅಕ್ಕರೆಯ ಮಾತುಗಾರಿಕೆ ಶಾಂತಿನಾಥರಿಗೆ ಸಾಧಿಸಿತ್ತು. ಕೊಲ್ಹಾಪುರ ನಮಗೆ ಬಹಳ ನೀಡಿದೆ. ಅಲ್ಲಿಯ ಅನೇಕ ವಿವರಗಳು ನನ್ನ ಕೆಲವು ಕತೆಗಳಲ್ಲಿ, ಕವಿತೆಗಳಲ್ಲಿ ಆಗೀಗ ರಿಂಗಣಗೊಳ್ಳುತ್ತಲೇ ಇರುತ್ತವೆ.

ಕನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಹಾ.ಮಾ. ನಾಯಕರ ಅಪೇಕ್ಷೆಯ ಮೇರೆಗೆ 1982ರಲ್ಲಿ ಧಾರವಾಡದಲ್ಲಿ 30 ಜನ ಯುವ ಕಾದಂಬರಿಕಾರರಿಗೆ 10 ದಿನಗಳ ಕಾದಂಬರಿ ಕಮ್ಮಟ ಆಯೋಜಿಸಿದ್ದೆ. ಈ ತರುಣರನ್ನು 6 ಗುಂಪುಗಳಾಗಿ ವಿಂಗಡಿಸಿದ್ದೆ. ಅವರನ್ನು ಪ್ರಾಯೋಗಿಕವಾಗಿ ಬರವಣಿಗೆಗೆ ತೊಡಗಿಸುವ ಉದ್ದೇಶದಿಂದ ಒಂದು ಹೊಸ ಕಾದಂಬರಿಯ ಮೊದಲ ಭಾಗ ಬೇಕೆಂದು ಶಾಂತಿನಾಥರನ್ನು ಕೇಳಿದೆ. ಆಗಷ್ಟೆ ಬರೆಯಲಾರಂಭಿಸಿದ್ದ ತಮ್ಮ "ವಿಕ್ಷೇಪ"ದ ಆರಂಭದ ಪುಟಗಳನ್ನು ಕೊಟ್ಟುಬಿಟ್ಟರು. ಅದು ಯುವಲೇಖಕರಿಗೆ ಟಾನಿಕ್ ನೀಡಿದಂಥ ಆಹ್ವಾನವಾಗಿತ್ತು.

ಸುಮತೀಂದ್ರ ನಾಡಿಗ ಒಂದು ದಿನ ನಸುಕಿನಲ್ಲಿಯೇ ಬಂದ. ಜಿಮಖಾನಾ ಕ್ಲಬ್ ಪಕ್ಕದಲ್ಲಿ ನಮ್ಮ ಮನೆ. ಸ್ನಾನ, ತಿಂಡಿ ಮುಗಿದ ಅನಂತರ, "ಬಾಬೂನ್ನ ನೋಡಬೇಕಲ್ಲ...?" ಅಂದ. ಅವರ ಮನೆ ಇಲ್ಲೇ ಹತ್ತಿರದಲ್ಲಿಯೇ ಇದೆ ಎಂದೆ; ಹಳ್ಳಿಕೇರಿ ಚಾಳಿಗೆ ನಡೆದುಹೋದೆವು. ಶಾಂತಿನಾಥರನ್ನು ಅವರ ತಂದೆ ಅಪ್ಪಾಜಿರಾಯರು 'ಬಾಬೂ' ಅನ್ನುತ್ತಿದ್ದರು; ಉಳಿದಂತೆ, ಗೌರೀಶ ಕಾಯ್ಕಿಣಿ, ಗಂಗಾಧರ ಚಿತ್ತಾಲ, ಗೆಳೆಯರಲ್ಲಿ ಸುಮತೀಂದ್ರ ನಾಡಿಗ, ಯಶವಂತ ಚಿತ್ತಾಲ, ಗಿರೀಶ ಕಾರ್ನಾಡ ಮಾತ್ರ ಬಾಬೂ ಅನ್ನುತ್ತಿದ್ದರು. ನಾನು ಯಾವಾಗಲೂ 'ಸರ್' ಅನ್ನುತ್ತಿದ್ದೆ, ಅವರು ನನಗೆ ಎಂಥ ಸಂದರ್ಭದಲ್ಲಿಯೂ 'ಸಿದ್ಧಲಿಂಗ ಅವರು' ಎಂದೇ ಸಂಬೋಧಿಸುತ್ತಿದ್ದರು. ಮನೆಗೆ ಹೋದೆವು. ಶಾಂತಿನಾಥರಿಗೆ ಸುಮತಿ